Sri S. D. KOTHAWALE.—Has the Government consulted the Taluka Boards in the matter of distributing the assets and liabilities?

Sri T. SUBRAMANYA.—It is unnecessary to consult the Taluka Boards about the distribution.

Sri S. D. KOTHAWALE —Has the Government disposed of any of the properties belonging to district local boards so for?

Sri T. SUBRAMANYA.—Not as yet.

Sri N. O. SAMAJI.—(Marathi)

Sri C. S. HULKOTI.—On what basis will the distribution be made?

Sri T. SUBRAMANYA.—Several considerations—population basis and other things.

ಶ್ರೀ ಕೆ. ಪುಟ್ಟಸ್ವಾಮಿ.—ತಾಲ್ಲೂಕ್ ಬೊರ್ಡು ಆಕ್ಟ್ ಪ್ರಕಾರ ಈ ಡಿಸ್ಟ್ರಿಕ್ಟ್ ಬೋರ್ಡು ಲೋಕಲ್ ಬೋರ್ಡುಗಳಿಗೆ ಸೇರಿದಂಥ ಆಸ್ತಿ ಆಯಾಯ ತಾಲ್ಲೂಕ್ ಬೋರ್ಡಿಗೆ ಸೇರುವದಿಲ್ಲವೆ?

ಶ್ರೀ ಟಿ. ಸುಬ್ರಮಣ್ಯ.—ಸೇರುವುದಿಲ್ಲ. ಎಲ್ಲ ಡಿಸ್ಟ್ರಿಕ್ಟ್ ಬೋರ್ಡುಗಳ ಆಸ್ತಿಯನ್ನು ಒಂದು ಪೂಲ್ ಹಾಕಿ ಅದನ್ನು ಹಂಚಲಾಗುವುದು.

ಶ್ರೀ ಎಸ್. ಜಿ. ನರಸಿಂಹೇಗಾಡ.—ಹಾಸನದಲ್ಲಿ ಡಿಸ್ಟ್ರಿಕ್ಟ್ ಬೋರ್ಡು ಹೈಸ್ಕೂಲ್ ಬಿಲ್ಡಿಂಗ್ ಆಸ್ತಿಯನ್ನು ತಾಲ್ಲೂಕು ಬೋರ್ಡಿಗೆ ಟ್ರಾನ್ಸ್‌ಫರ್ ಮಾಡುವುದಕ್ಕೆ ಏನು ಕ್ರಮ ಕೈಗೆದು ಕೊಂಡಿದ್ದೀರಿ?

ಶ್ರೀ ಟಿ. ಸುಬ್ರಹ್ಮಣ್ಯ.—ಏನೂ ಮಾಡಿಲ್ಲ.

ಶ್ರೀ ಎಸ್. ಜಿ. ನರಸಿಂಹೇಗೌಡ.—ಹಾಗಾದರೆ ಪೇಮೆಂಟ್ ಮಾಡತಕ್ಕಂಥವರು ಯಾರು?

ಶ್ರೀ ಟಿ. ಸುಬ್ರಹ್ಮಣ್ಯ.—ಡಿಸ್ಟ್ರಿಕ್ಟ್ ಬೋರ್ಡು ಯಾವ ರೀತಿಯಾಗಿ ಸುವ್ಯವಸ್ಥಿತವಾಗಿ ನಡೆಸಬೇಕೆಂಬ ವಿಚಾರದಲ್ಲಿ ಇನ್ನೂ ಒಂದು ನಿಖರವಾದ ತೀರ್ಮಾನ ಸರಕಾರ ಕೈಗೆದುಕೊಂಡಿಲ್ಲ.

ಶ್ರೀ ಎಸ್. ಜಿ. ನರಸಿಂಹೇಗಾಡ.—ಇಂಥ ಒಂದು ವ್ಯವಸ್ಥೆಯನ್ನು ಜಾಗ್ರತೆ ಕೈಕೊಳ್ಳದೇ ಇರುವುದರಿಂದ ಹೈಸ್ಕೂಲು ಉಪಾಧ್ಯಾಯರುಗಳಿಗೆ ಸಕಾಲದಲ್ಲಿ ಸಂಬಳ ತಲುಪುತ್ತಿಲ್ಲ ಎಂಬುದು ಗಮನಕ್ಕೆ ಬಂದಿದೆಯೇ?

ಶ್ರೀ ಟಿ. ಸುಬ್ರಹ್ಮಣ್ಯ.—ಅದು ನನಗೆ ಗೊತ್ತಿಲ್ಲ. ಆದರೆ ಉಪಾಧ್ಯಾಯರಿಗೆ ಸರಿಯಾಗಿ ಸಂಬಳ ತಲಪುತ್ತಿದೆ ಎಂಬುದು ಗೊತ್ತಿದೆ.

PRACTICE OF GIVING A PHOTO COPY OF DOCUMENT REGISTERED IN THE SUB-REGISTRAR OFFICE.

*Q.—435. Sri S. R. PATIL (Kalgi).—

Will the Government be pleased to state:—

(*a*) whether the practice of giving a photo copy of the document registered in the Sub-Registrar office was in force in Bombay Karnataka area before re-organisation;

(*b*) whether they intend to intoduce this practice in new Mysore State:

(*c*) whether this practice is now in force in any part of new Mysore State?

A.—Sri KADIDAL MANJAPPA (Minister for Revenue).—

(*a*) Yes.

(*b*) The question is under consideration.

(*c*) Yes.

ಶ್ರೀ ಎಸ್. ಆರ್. ಪಾಟೀಲ್.—ಈ ಪದ್ಧತಿಯು ಈಗ ಹೊಸ ಮೈಸೂರು ರಾಜ್ಯದ ಯಾವ ಭಾಗದಲ್ಲಿಯಾದರೂ ಜಾರಿಯಲ್ಲಿದೆಯೆ ಏಂದು (c) ಪ್ರಶ್ನೆಗೆ ಇದೆ ಎಂದು ಉತ್ತರ ಅದೆ. ಹಾಗಾದರೆ ಅದು ಯಾವ ಭಾಗದಲ್ಲಿದೆ?

†ಶ್ರೀ ಕಡಿದಾಳ್ ಮಂಜಪ್ಪ.—ಬೆಳಗಾಂವಿ ಡಿವಿಜನ್ನಿನಲ್ಲಿದೆ.

ಶ್ರೀ ಎಸ್. ಆರ್. ಪಾಟೀಲ್.—ಈ ಫೋಟೋ ರಿಜಿಸ್ಟ್ರೇಷನ್ ಪದ್ಧತಿ ಜಾರಿಯಲ್ಲಿ ಇರುವ ಕಡೆ ಫೋರ್ಜರಿ ಮಾಡಲು ಅವಕಾಶವಿದೆ ಎಂಬುದು ಸರಕಾರದ ಗಮನಕ್ಕೆ ಬಂದಿದೆಯೆ?

ಶ್ರೀ ಕಡಿದಾಳ್ ಮಂಜಪ್ಪ.—ಫೋಟೋ ರಿಜಿಸ್ಟ್ರೇಷನ್ ಪದ್ಧತಿ ಇದ್ದಲ್ಲಿ ಫೋರ್ಜರಿ ಮಾಡಲಕ್ಕೆ ಆಗುವುದಿಲ್ಲ.

ಶ್ರೀ ಎಸ್. ಆರ್. ಪಾಟೀಲ್.—ಪ್ರತಿಯೊಂದು ರಿಜಿಸ್ಟ್ರೇಷನ್ ಆಫೀಸಿನಲ್ಲಿ ಕನ್ನಡ ಕಾಪಿಸ್ಟ್ಗಳನ್ನು ಏಕೆ ಒದಗಿಸುವುದಕ್ಕಾಗಿಲ್ಲ?

ಶ್ರೀ ಕಡಿದಾಳ್ ಮಂಜಪ್ಪ.—ಕೊಟ್ಟಿದ್ದೇವೆ. ನಿಮ್ಮ ಕಡೆಗಳಲ್ಲಿ ಸ್ವಲ್ಪ ತೊಂದರೆಯಿದೆ. copyists ಇದ್ದಾರೆ, ಅವರಿಗೇ ಈ ಕೆಲಸವನ್ನು ಕೊಡಲಾಗಿದೆ.

Sri B. S. SHANKARAPPA.—What is meant by photo copy?

ಶ್ರೀ ಕಡಿದಾಳ್ ಮಂಜಪ್ಪ.—ಫೋಟೋ ರಿಜಿಸ್ಟ್ರಿ ಆಫೀಸ್ ಎಂದು ಪೂನಾದಲ್ಲಿದೆ. ಅಲ್ಲಗೆ ರಿಜಿಸ್ಟರ್ ಆದ ಪತ್ರಗಳನ್ನೂ ಕಳಿಸುತ್ತಾರೆ. ಅವರು ಫೋಟೋ ತೆಗೆದುಕೊಂಡು ಅಸಲು ಪತ್ರವನ್ನು ವಾಪಸು ಕಳಿಸುತ್ತಾರೆ. ನಕಲು ಬೇಕಾದರೆ, ಅರ್ಜಿ ಹಾಕಿದರೆ ಅಲ್ಲಗೆ ಕಳಿಸುತ್ತಾರೆ. ಅಲ್ಲಿಂದ ಫೋಟೋಗಳು ಬರುತ್ತವೆ.

ಶ್ರೀ ಜಿ. ಎನ್. ಚಿನ್ನಸ್ವಾಮಿ.—ಈ ಪದ್ಧತಿಯನ್ನು ಹಳೆಯ ಮೈಸೂರಿನಲ್ಲಿ ಏಕೆ ಜಾರಿಗೆ ಕೊಡುವಾರದು?

Sri KADIDAL MANJAPPA.—It is intended to introduce that system and instal photo registry office in Bangalore. We are examining the scheme.

Sri G. N. PUTTANNA.—May I know whether the present system is costlier or the photo system is costlier?

Sri KADIDAL MANJAPPA.—I believe, the present system is costlier.

Dr. R. NAGAN GOWDA.—Are Government aware that this photo system is most economical and it is a modern type?

Sri KADIDAL MANJAPPA.—That is why we are installing an office here.

Sri U. M. MADAPPA.—Is it only in Bangalore or to all units?

ಶ್ರೀ ಕಡಿದಾಳ್ ಮಂಜಪ್ಪ.—ಬೆಂಗಳೂರಿನಲ್ಲಿದ್ದರೆ ಮಧ್ಯರಾಷ್ಟ್ರ (central place) ಆಗುವುದರಿಂದ ಎಲ್ಲ ಕಡೆಗೂ ಅನುಕೂಲವಾಗುತ್ತದೆ. ಚಾಮರಾಜ ನಗರಕ್ಕೆ ಹಾಕುವುದಕ್ಕಾಗುವುದಿಲ್ಲ.

Sri U. M. MADAPPA.—Whether there is cost of estimate in this respect, I want to know.

ಶ್ರೀ ಕಡಿದಾಳ್ ಮಂಜಪ್ಪ.—Detailed estimate ಆಗಿಲ್ಲ. ಸುಮಾರು ಮೂರು-ನಾಲ್ಕು ಲಕ್ಷ ರೂಪಾಯಿ ಆಗಬಹುದು ಎಂದು ಕಾಣುತ್ತದೆ.

Sri U. M. MADAPPA.—Suppose, it is introduced to all the units as it is in Bombay ; what is the money required ?

ಶ್ರೀ ಕಡಿದಾಳ್ ಮಂಜಪ್ಪ.—All the units ಎಂದರೂ ಸಹ ಒಂದೇ ಕಡೆಯಿರುತ್ತದೆ. ಬೊಂಬಾಯಿ ಪ್ರಾಂತಕ್ಕೆ ಹಿಂದೆ ಪೂನಾದಲ್ಲಿತ್ತು. ಈಗ ಮೈಸೂರು ಸಂಸ್ಥಾನಕ್ಕೆ ಎಲ್ಲಿಯಾದರೂ ಒಂದು ಕಡೆ ಪೋಚೋ ರಿಜಿಸ್ಟ್ರಿ ಆಫೀಸ್ ಇರುತ್ತದೆ. ಅಲ್ಲಿಗೆ ಸಬ್ ರಿಜಿಸ್ಟ್ರಾರ್ ಅವರು ಕಳಿಸಿದರೆ ಪೋಚೋ ತೆಗೆದುಕೊಂಡು ವಾಪಸು ಕಳಿಸುತ್ತಾರೆ.

ಶ್ರೀ ಕೆ. ಎಚ್. ವೆಂಕಟರೆಡ್ಡಿ.—ಪ್ರತಿಯೊಂದು ಜಿಲ್ಲೆಯಲ್ಲಿಯೂ ಒಂದು ಆಫೀಸ್ ಮಾಡಲು ಸರ್ಕಾರಕ್ಕೆ ಏನಾದರೂ ತೊಂದರೆಯಿದೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಅನಾವಶ್ಯಕವಾಗಿ ಖರ್ಚಾಗುತ್ತದೆ.

ಶ್ರೀ ಬಸನಗಾಡ.—ಹೈದರಾಬಾದ್ ಕರ್ನಾಟಕದ ಭಾಗದಲ್ಲಿ ರಿಜಿಸ್ಟ್ರೇಷನ್ ಆಫೀಸಿನಲ್ಲಿ ಉರ್ದುವಿನಲ್ಲಿ ರಿಜಿಸ್ಟರಾಗುತ್ತಿವೆ. ಇದು ಎಂದಿಗೆ ನಿಲ್ಲುತ್ತದೆ ?

ಶ್ರೀ ಕಡಿದಾಳ್ ಮಂಜಪ್ಪ.—ಕ್ರಮೇಣ ನಿಲ್ಲುತ್ತದೆ.

———

INVESTIGATION CIRCLE FOR MINOR IRRIGATION IN TUMKUR DISTRICT.

*Q.—478. Sri K. P. REVANNASIDDAPPA (Tiptur).—

Will the Government be pleased to state.—

(*a*) whether there is an Investigation Circle for Minor Irrigation in Tumkur District ;

(*b*) the number of the estimates for the work prepared in each Taluk of the District, with the names of such Taluks, and the amount ;

(*c*) the number of estimates prepared with reference to Tiptur Taluk and the amount ?

A.—Sri M. N. NAGHNOOR (Deputy Minister for Public Works).—

(*a*) No. There is a Minor Irrigation Investigation Sub-Division at Tumkur, attached to the Executive Engineer, Minor Irrigation Investigation Division, Bangalore.

	Name of Taluk		*No. of estimates prepared*	*Total Amount*
				Rs.
1	Tumkur	...	5	3,99,400
2	Kunigal	...	1	1,46,000
3	Gubbi	...	1	4,00,000
4	Koratagere	...	8	21,49,000
5	Madhugiri	...	2	95,000
6	Chikkanayakanahalli	...	Nil	Nil
7	Tiptur	...	Nil	Nil
8	Pavagada	...	Nil	Nil
9	Sira	...	Nil	Nil
10	Turuvekere	...	Ni	Nil

(*c*) *Vide* reply to clause (*b*) above.